**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ., ರವರ ನ್ಯಾಯಾಲಯ ತಿ.ನರಸೀಪುರ.**

**ಸಿ ಸಿ ನಂ.621/2023**

| | | |
|---|---|---|
| ಸಾಕ್ಷಿದಾರರ ಹೆಸರುಃ | ನಂಜೇಗೌಡ | ಸಿ ಡಬ್ಲ್ಯೂಃ11 |
| ತಂದೆಯ ಹೆಸರುಃ | ಸುಬ್ಬೇಗೌಡ | ಪಿ ಡಬ್ಲ್ಯೂಃ3 |
| ವಯಸ್ಸುಃ | 45 ವರ್ಷ | |
| ಉದ್ಯೋಗಃ | ವ್ಯವಸಾಯ | ಪ್ರ.ವ .ಬೋ.ದಿಃ |
| ವಾಸಸ್ಥಳಃ | ಬಸವನಹಳ್ಳಿ | 10.02.2026 |

**ಮುಖ್ಯ ವಿಚಾರಣೆಃ** ಮಾನ್ಯ **ಎಪಿಪಿ** ರವರಿಂದಃ

ಈಗ ನೋಡುತ್ತಿರುವ ದಾಖಲೆಯಲ್ಲಿರವ ಸಹಿ ನನ್ನದೇ, ಸದರಿ ದಾಖಲೆಯು ಸ್ಥಳ ಮಹಜರು ಆಗಿದ್ದು ಅದನ್ನು ಈಗಾಗಲೇ ನಿ ಪಿ 2 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿ ಪಿ 2(ಬಿ) ಎಂದು ಗುರುತಿಸಲಾಯಿತು. ನಿಪಿ 2 ಕ್ಕೆ ನಾನು ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ನನ್ನನ್ನು ಹೊರತುಪಡಿಸಿ ಬೇರೆ ಯಾರೆಲ್ಲಾ ನಿ ಪಿ 2 ಕ್ಕೆ ಸಹಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನನಗೆ ನಿ ಪಿ 2 ರಲ್ಲಿ ಬರೆದಿರುವ ಸಂಗತಿಗಳು ಗೊತ್ತಿಲ್ಲ. ನನಗೆ ನಿ ಪಿ 2 ಅನ್ನು ಯಾರೂ ಓದಿ ಹೇಳಿರುವುದಿಲ್ಲ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಎಪಿಪಿಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಅನುಮತಿ ಕೋರಿದ್ದು, ಸಾಕ್ಷಿಯು ಪ್ರತಿಕೂಲವಾಗಿ ನುಡಿದಿದ್ದು, ಅನುಮತಿ ನೀಡಿದೆ.)

**ಪಾಟೀ ಸವಾಲುಃ ಮಾನ್ಯ ಎಪಿಪಿ ರವರಿಂದಃ**

ದಿನಾಂಕ 16.05.2023 ರಂದು ಚಾ ಸಾ 2 ರವರು ತೋರಿಸಿದ ಕೃತ್ಯ ನಡೆದ ಸ್ಥಳದಲ್ಲಿ ಮಧ್ಯಾಹ್ನ 3.00-3.40 ಗಂಟೆಯವರೆಗೂ ಪೊಲೀಸರು ನನ್ನ ಮತ್ತು ಚಾ ಸಾ 10 ರವರ ಸಮಕ್ಷಮ ನಿ ಪಿ 2 ರಂತೆ ಪೊಲೀಸರು ಸ್ಥಳ ಮಹಜರು ಜರುಗಿಸಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ನಿ ಪಿ 2 ರಂತೆ ಪೊಲೀಸರು ಸ್ಥಳ ಮಹಜರು ಜರುಗಿಸಿದ್ದರೂ ಸಹ ನಾನು ಆರೋಪಿಯೊಂದಿಗೆ ಶಾಮಿಲಾಗಿ ಆರೋಪಿಗೆ ಶಿಕ್ಷೆ ಆಗಬಾರದು ಎಂಬ ಕಾರಣದಿಂದ ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿತರ ಪರ  ವಕೀಲರಿಂದಃ ಪಾಟೀ ಸವಾಲು ಇರುವುದಿಲ್ಲ ಎಂದು ಹೇಳಿರುತ್ತಾರೆ.

ಮರು ವಿಚಾರಣೆಃ ಇಲ್ಲ.

ತೆರೆದ ನ್ಯಾಯಾಲಯದಲ್ಲಿ ಈ ಮೇಲೆ ಸಾಕ್ಷಿ ಸ್ವತಃ ಹೇಳಿದ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ.

(ಸಚಿನ್ ಹೆಚ್ . ಆರ್.)
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ತಿ.ನರಸೀಪುರ.